


# ಗಳಿಸಿದ ಸ್ವಾತಂತ್ರ್ಯ ಉಳಿಸಿಕೊಳ್ಳಬೇಕು ಹೇಗೆ?

**ಸ್ವಾಮಿ ಜಗದಾತ್ಮಾನಂದ**

*ರಾಮಕೃಷ್ಣ ಮಹಾಸಂಘದ ಹಿರಿಯ ಸಂನ್ಯಾಸಿಗಳಾದ ಸ್ವಾಮಿ ಜಗದಾತ್ಮಾನಂದಜಿಯವರು ಪೊನ್ನಂಪೇಟೆಯ ರಾಮಕೃಷ್ಣ ಶಾರದಾಶ್ರಮದ ಅಧ್ಯಕ್ಷರೂ ಹಾಗೂ ಅತ್ಯಂತ ಜನಪ್ರಿಯವಾದ "ಬದುಕಲು ಕಲಿಯಿರಿ" ಪುಸ್ತಕದ ಲೇಖಕರೂ ಆಗಿದ್ದಾರೆ.*

**ಸ್ವಾ**ತಂತ್ರ್ಯೋತ್ಸವದ ದಿನ ಬ್ರಿಟಿಷರಿಂದ ನಮ್ಮ ದೇಶ ರಾಜಕೀಯ ಸ್ವಾತಂತ್ರ್ಯ ಪಡೆದದಿನ. ಸುಮಾರು ಮುನ್ನೂರು ವರ್ಷಗಳ ಹಿಂದೆ (೧೭೦೦) ಈ ದೇಶಕ್ಕೆ ವ್ಯಾಪಾರಕ್ಕಾಗಿ ಬಂದ ಬ್ರಿಟಿಷರು ಕ್ರಮೇಣ ತಮ್ಮ ಸೇನಾಬಲದಿಂದ, ಕುತಂತ್ರಗಳಿಂದ ಒಡೆದು ಆಳುವ ನೀತಿಯಿಂದ, ದುಷ್ಟ ದಬ್ಬಾಳಿಕೆಯ ಶಾಸನಗಳಿಂದ ಇಡೀ ದೇಶವನ್ನು ಸುಮಾರು ೨೫೦ ವರ್ಷ ಆಳಿದರು. ಡಾಲ್‌ಹೌಸಿ ಎಂಬ ವೈಸ್‌ರಾಯ್ ಸೃಷ್ಟಿಸಿದ Doctrine of Lapse ಎಂಬ ಶಾಸನದ ಪ್ರಕಾರ ದೇಶೀಯ ರಾಜರಿಗೆ ಸಂತಾನವಿಲ್ಲದಿದ್ದರೆ ಅವರ ರಾಜ್ಯ ಬ್ರಿಟಿಷರಿಗೆ ಸೇರಬೇಕಿತ್ತು. ವ್ಯಾಪಾರಕ್ಕಾಗಿ ಪರವೂರಿಗೆ ಹೋದವನೊಬ್ಬ ಬಲಿಷ್ಠನಾಗಿ ಆ ಊರಿನಲ್ಲಿ ಯಾವುದಾದರೂ ಜಮೀನುದಾರನೊಬ್ಬನಿಗೆ ಮಕ್ಕಳಿಲ್ಲದಿದ್ದರೆ ಅವನ ಆಸ್ತಿ ತನಗೇ ನೇರ ಬರಬೇಕೆಂದು ವಶಪಡಿಸಿಕೊಳ್ಳುವಂಥ ಅನ್ಯಾಯ ಅದು.

ಬ್ರಿಟಿಷರು ತಮ್ಮ ಅನುಕೂಲಕ್ಕಾಗಿ ರೈಲ್ವೇ ಮುಂತಾದ ಕೆಲವು ಅಭಿವೃದ್ಧಿ ಕಾರ್ಯಗಳನ್ನು ಮಾಡಿದರು. ಹಾಗೆಯೇ ಇಂಗ್ಲಿಷ್ ಭಾಷೆಯನ್ನು ಹೇರಿದರು. ಇಲ್ಲಿನ ಸಂಸ್ಕೃತಿಯನ್ನು ಹೀಗಳೆದರು. ಮತಾಂತರಕ್ಕೆ ಪ್ರೋತ್ಸಾಹ ನೀಡಿದರು. ಗುಡಿಕೈಗಾರಿಕೆಗಳನ್ನು ನಾಶಮಾಡಿದರು. ಜನರು ಇದನ್ನೆಲ್ಲ ಅರ್ಥಮಾಡಿಕೊಂಡು ಕ್ರಮೇಣ ಸಂಘಟಿತರಾಗಿ ಪ್ರತಿಭಟಿಸತೊಡಗಿದಾಗ, ಹಿಂದೂ-ಮುಸ್ಲಿಂ, ಬ್ರಾಹ್ಮಣ-ಶೂದ್ರ, ಆರ್ಯ-ದ್ರಾವಿಡ ಮುಂತಾದ ಭೇದಗಳನ್ನು ಸೃಷ್ಟಿಸಿ ಜನರನ್ನು ಒಡೆದರು. ಆದರೂ ಸುಮಾರು ೯೦ ವರ್ಷಗಳ ಕಾಲ ಬೇರೆ ಬೇರೆ ರೀತಿಯಲ್ಲಿ ವಿಭಿನ್ನ ನಾಯಕರ ನೇತೃತ್ವದಲ್ಲಿ ಭಾರತೀಯ ಜನ ಒಂದಾಗಿ ಹೋರಾಡಿದರು. ಈ ದೀರ್ಘ ಹೋರಾಟದಲ್ಲಿ ಲಕ್ಷಾಂತರ ಜನ ಪ್ರಾಣ ತೆತ್ತರು, ಜೈಲಿನಲ್ಲಿ ಕೊಳೆತರು, ಉದ್ಯೋಗ, ಆಸ್ತಿ, ಹೆಂಡತಿ ಮಕ್ಕಳನ್ನು ಕಳೆದುಕೊಂಡರು. ಅವರೆಲ್ಲರ ಅಪಾರ ತ್ಯಾಗ ಹೋರಾಟ ಬಲಿದಾನಗಳ ಪರಿಣಾಮವಾಗಿ ದೇಶಕ್ಕೆ ಸ್ವಾತಂತ್ರ್ಯ ಬಂತು. ಆದರೆ ಅದು ಬರೀ ರಾಜಕೀಯ ಸ್ವಾತಂತ್ರ್ಯ. ಅಂದರೆ ನಮ್ಮ ದೇಶವನ್ನು ನಮ್ಮ ದೇಶಿಯರೇ ಆಳುವ ವ್ಯವಸ್ಥೆ. ಇದು ಸ್ವಾತಂತ್ರ್ಯದ ಒಂದು ಮೆಟ್ಟಲು ಮಾತ್ರ; ಅನೇಕ ಮೆಟ್ಟಲುಗಳನ್ನು ನಾವಿನ್ನೂ ಏರಬೇಕಾಗಿದೆ.

> *ವ್ಯಕ್ತಿಗಳ ವ್ಯಕ್ತಿತ್ವ ಅರಳದೇ ಒಳ್ಳೆಯ ಸಮಾಜವನ್ನಾಗಲೀ ದೇಶವನ್ನಾಗಲೀ ಕಟ್ಟಲು ಸಾಧ್ಯವಿಲ್ಲ.*

**ಸ್ವಾತಂತ್ರ್ಯದ ಉದ್ದೇಶ :** ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸುಪ್ತಶಕ್ತಿಯನ್ನು ಸಂಪೂರ್ಣವಾಗಿ ಬೆಳೆಸಿಕೊಂಡು ಉತ್ತಮ ಪ್ರಜೆಯಾಗಿ ತನ್ನ ಅಭ್ಯುದಯದ ಜೊತೆಗೆ ಸಮಾಜಕ್ಕೆ ತನ್ನಿಂದಾಗುವ ಕೊಡುಗೆಯನ್ನು ನೀಡಲು ಸಾಧ್ಯವಾಗುವ ವಾತಾವರಣದ ಸೃಷ್ಟಿಯಾಗಬೇಕು. ಇದಾಗಬೇಕಾದರೆ ಪ್ರತಿ ವ್ಯಕ್ತಿಗೂ ಅನ್ನ, ಬಟ್ಟೆ, ವಸತಿ, ಶಿಕ್ಷಣ, ಕೆಲಸ—ಮುಂತಾದ ಮೂಲಭೂತ ಅವಶ್ಯಕತೆಗಳು ದೊರೆಯಬೇಕು. ಸತ್ಯ, ನ್ಯಾಯ, ಧರ್ಮ, ನೀತಿ, ಪರಧರ್ಮ ಸಹಿಷ್ಣುತೆ, ಶಾಂತಿ, ಸೌಹಾರ್ದ, ಶ್ರಮಗೌರವ, ಕರ್ತವ್ಯನಿಷ್ಠೆ, ಶಿಸ್ತು, ದೇಶಭಕ್ತಿ, ಮಾನವೀಯತೆ, ಅಹಿಂಸೆ, ಸಂಯಮ ಮುಂತಾದ ಮೌಲ್ಯಗಳು ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲೂ ಆಳವಾಗಿ ಬೇರೂರಬೇಕು. ಹಾಗಾಗದಿದ್ದರೆ ಆಳುವವರು ದೇಶೀಯರೇ ಆದರೂ ನಿಜವಾದ ಸ್ವಾತಂತ್ರ್ಯ ಜನತೆಗೆ ಸಿಗಲಾರದು. ಆಳುವವರದ್ದೇ ಒಂದು ವರ್ಗವಾಗಿ ಆಳಿಸಿಕೊಳ್ಳುವವರದ್ದೇ ಒಂದು ವರ್ಗವಾಗಿ ಬಹುಪಾಲು ಜನ ಸ್ವಾತಂತ್ರ್ಯದಿಂದ ವಂಚಿತರಾಗುತ್ತಾರೆ.

ದುರ್ದೈವವಶಾತ್ ನಮ್ಮ ದೇಶದಲ್ಲಿ ಕಳೆದ ೫೬ ವರ್ಷಗಳಲ್ಲಿ ಸ್ವಲ್ಪಮಟ್ಟಿನ ಪ್ರಗತಿಯಾಗಿದ್ದರೂ ಆಗಬೇಕಾದಷ್ಟು ಆಗಿಲ್ಲ. ನಾವು ಪ್ರಜಾಸತ್ತೆಯ ವ್ಯವಸ್ಥೆಯನ್ನು ಅಂಗೀಕರಿಸಿದ್ದರೂ ಅದು ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ. ನೂರು ಕೋಟಿ ಜನರಲ್ಲಿ ಐವತ್ತು ಕೋಟಿಗಿಂತ ಹೆಚ್ಚಾಗಿ ಕಡುಬಡವರಾಗಿದ್ದು ಅವರು ಎಲ್ಲ ಮೂಲಭೂತ ಆವಶ್ಯಕತೆಗಳಿಂದ ವಂಚಿತರಾಗಿದ್ದಾರೆ. ಸಂವಿಧಾನದಲ್ಲಿ ಹೇಳಿರುವ ಸ್ವಾತಂತ್ರ್ಯಗಳೆಲ್ಲ ಅವರ ಪಾಲಿಗೆ ಅರ್ಥಹೀನವಾಗಿವೆ. ಉದಾ: ವಿಮಾನದಲ್ಲಿ ಪ್ರಯಾಣ ಮಾಡುವ ಸ್ವಾತಂತ್ರ್ಯ ಎಲ್ಲರಿಗೂ ಇದೆ. ಆದರೆ ಅದು ಬಡವನಿಗೆ ಸಿಗುತ್ತದೆಯೇ? ಶಾಸಕ, ಮಂತ್ರಿ, ಪ್ರಧಾನಿ ಆಗುವ ಸ್ವಾತಂತ್ರ್ಯ ಎಲ್ಲರಿಗೂ ಇದೆ, ಆದರೆ ನಿಜವಾಗಿ ಎಷ್ಟು ಮಂದಿಗೆ ಅದು ಸಾಧ್ಯ? ಸ್ವಾತಂತ್ರ್ಯವನ್ನು ಬಳಸುವುದಕ್ಕೂ ತಕ್ಕ ಸಾಮರ್ಥ್ಯ ಬೇಕಾಗುತ್ತದೆ.

ವ್ಯಕ್ತಿಗಳಿಂದ ಸಮಾಜ; ಸಮಾಜಗಳಿಂದ ದೇಶ. ವ್ಯಕ್ತಿಗಳ ವ್ಯಕ್ತಿತ್ವ ಅರಳದೇ ಒಳ್ಳೆಯ ಸಮಾಜವನ್ನಾಗಲೀ ದೇಶವನ್ನಾಗಲೀ ಕಟ್ಟಲು ಸಾಧ್ಯವಿಲ್ಲ. ಕಾನೂನುಗಳು, ಕೋರ್ಟು, ಪೋಲೀಸು ಮುಂತಾದ ವ್ಯವಸ್ಥೆಗಳು ಅಗತ್ಯವಾದರೂ ಅವುಗಳಿಂದಲೇ ಮನುಷ್ಯರನ್ನು ಬದಲಾಯಿಸಲು ಸಾಧ್ಯವಿಲ್ಲ. ಭ್ರಷ್ಟಾಚಾರದ

ವಿರುದ್ಧ ಬೇಕಾದಷ್ಟು ಕಾನೂನುಗಳಿವೆ. ಆದರೆ ಭ್ರಷ್ಟಾಚಾರ ಹೆಚ್ಚಾಗುತ್ತಿದೆಯೇ ಹೊರತು ಕಡಮೆಯಾಗುತ್ತಿಲ್ಲ. ವರದಕ್ಷಿಣೆಯ ಕಾಟ ಮತ್ತು ಮೊತ್ತ ಹೆಚ್ಚುತ್ತಲೇ ಇದೆ. ಎಷ್ಟೋ ಸಂದರ್ಭಗಳಲ್ಲಿ ಭ್ರಷ್ಟರ ವಿರುದ್ಧ ಕಾರ್ಯಾಚರಣೆ ಮಾಡಬೇಕಾದ ಅಧಿಕಾರಿಗಳೇ ಭ್ರಷ್ಟರಾಗಿರುವುದುಂಟು. ಭ್ರಷ್ಟರೆಂದು ಕೋರ್ಟಿನಲ್ಲಿ ಸಾಬೀತಾದವರನ್ನು ಜನರು ಪುನಃ ಚುನಾವಣೆಗಳಲ್ಲಿ ಮತನೀಡಿ ಗೆಲ್ಲಿಸುತ್ತಾರೆ. ಅವರು ಮಂತ್ರಿಗಳೋ ಮುಖ್ಯಮಂತ್ರಿಗಳೋ ಆಗಬಹುದು. ಇಂಥವರ ಆಡಳಿತದಿಂದ ಭ್ರಷ್ಟಾಚಾರ ಕಡಮೆಯಾಗುವುದೇ? ಈ ವ್ಯವಸ್ಥೆಯಲ್ಲಿ"ಎ" ಭ್ರಷ್ಟನ ಬದಲು "ಬಿ" ಭ್ರಷ್ಟ ಅಧಿಕಾರಕ್ಕೆ ಬರಬಹುದು ಅಷ್ಟೇ. ಇದರಿಂದ ಬಡಜನರ, ಸಾಮಾನ್ಯ ಜನರ ಬದುಕಿಗೆ ಬೆಳಕು ಬರಲಾರದು.

ಸ್ವತಂತ್ರ ಭಾರತದ ಪ್ರಥಮ ಗೌರ್ನರ್ ಜನರಲ್ ಆಗಿದ್ದ ಚಕ್ರವರ್ತಿ ರಾಜಗೋಪಾಲಾಚಾರಿ ಅವರು ಸುಮಾರು ಎಂಭತ್ತು ತೊಂಭತ್ತು ವರ್ಷಗಳ ಹಿಂದೆ ಬ್ರಿಟಿಷರ ಕೈದಿಯಾಗಿ ಜೈಲಿನಲ್ಲಿದ್ದಾಗ ತಮ್ಮ ದಿನಚರಿಯಲ್ಲಿ ಈ ಮಾತುಗಳನ್ನು ಬರೆದಿದ್ದರು : "ನಮಗೆ ಸ್ವಾತಂತ್ರ್ಯ ಲಭ್ಯವಾದೊಡನೆ ಚುನಾವಣೆಗಳು, ಅದರಿಂದಾಗುವ ಭ್ರಷ್ಟಾಚಾರ, ಅಧಿಕಾರ ಮತ್ತು ಸಂಪತ್ತಿನ ಬಲದಿಂದ ದಬ್ಬಾಳಿಕೆ, ಆಡಳಿತದ ಅಸಾಮರ್ಥ್ಯ ಇವೆಲ್ಲವೂ ಸೇರಿ ಜನಜೀವನವನ್ನು ನರಕಸದೃಶವನ್ನಾಗಿ ಮಾಡುವುವು. ಜನರು ತಮಗೆ ಹಿಂದೆ ದೊರೆತಿದ್ದ ನ್ಯಾಯಬದ್ಧ ಸಮರ್ಥ ಪ್ರಾಮಾಣಿಕ ಹಾಗೂ ಶಾಂತಿಯುತ ಆಡಳಿತವನ್ನು ದುಃಖದಿಂದ ಸ್ಮರಿಸುವರು. ಅಗೌರವ ಮತ್ತು ಪಾರತಂತ್ರ್ಯದಿಂದ ಬಿಡುಗಡೆಯನ್ನು ಪಡೆದಿದ್ದೇವೆ ಎಂಬುದು ಮಾತ್ರ ನಮ್ಮ ಪಾಲಿನ ಸಮಾಧಾನ. ವಿಶಾಲ ಮನೋಭಾವದ ವಿಶ್ವಮಟ್ಟದ ಶಿಕ್ಷಣ ಪದ್ಧತಿಯಿಂದ ಮಾತ್ರ ನಾವು ಒಳಿತನ್ನು ಆಶಿಸಬಹುದು. ಈ ಶಿಕ್ಷಣದಿಂದ ನಾಗರಿಕರು ಚಿಕ್ಕಂದಿನಿಂದಲೇ ಸದಾಚಾರ ದೈವಭಕ್ತಿ ಪ್ರೇಮವೇ ಮೊದಲಾದ ಮೌಲ್ಯಗಳನ್ನು ಬೆಳೆಸಿಕೊಂಡು ವಿಶ್ವಶಾಂತಿಯನ್ನು ಸ್ಥಾಪಿಸಲು ಸಾಧ್ಯ. ಇಲ್ಲದಿದ್ದರೆ ಘೋರ ಅನ್ಯಾಯ ಹಾಗೂ ಹಣದ ದುರುಪಯೋಗ ನಡೆಯುವುದು. ಎಲ್ಲರೂ ಪರಸ್ಪರ ಪ್ರೀತಿಸುವುದರಲ್ಲಿ ಆನಂದವನ್ನು ಕಂಡುಕೊಂಡರೆ ಮತ್ತು ದೈವಭೀತಿಯುಳ್ಳವರಾಗಿ ನ್ಯಾಯವಂತರಾಗಿ ಬಾಳಿದರೆ ಈ ಪ್ರಪಂಚ ಎಷ್ಟು ಸುಖಮಯವಾದೀತು! ಇತರ ದೇಶಗಳಿಗಿಂತ ಭಾರತದಲ್ಲಿ ಇಂತಹ ತತ್ತ್ವಗಳನ್ನು ಆಚರಣೆಗೆ ತರುವಂಥ ಶಕ್ತಿ ಹೆಚ್ಚು ಇದೆ."

ಈ ಜಗತ್ತಿನ ಇನ್ನಾವ ಪ್ರಜಾಪ್ರಭುತ್ವ ರಾಜ್ಯದಲ್ಲೂ ರಾಜಕೀಯ ಮುಖಂಡರು ದೇಶದ ಧರ್ಮವನ್ನು ಖಂಡಿಸಿರುವುದೆಂಬುದಿಲ್ಲ. ಇವರನ್ನು ಜನರು ಆರಿಸಿದ್ದು ರಾಜಕೀಯ ಕ್ಷೇತ್ರಕ್ಕೆ ಹೊರತು ಧಾರ್ಮಿಕ ಕ್ಷೇತ್ರಕ್ಕಲ್ಲ. ಅದರಲ್ಲಿ ಕೈಹಾಕಲಿಕ್ಕೆ ಅವರಿಗೆ ಯಾವ ಅಧಿಕಾರವೂ ಇಲ್ಲ. ಇದಕ್ಕೆ ಕಾರಣ ಧಾರ್ಮಿಕರೂ ಹೌದು. ಇವರಲ್ಲಿ ಒಗ್ಗಟ್ಟಿಲ್ಲ. ಆದಕಾರಣ ಕೇವಲ ಪ್ರಜಾಸತ್ತೆ ಎಂಬ ರಾಜಕೀಯ ವ್ಯವಸ್ಥೆ ಬಂದ ಮಾತ್ರಕ್ಕೆ ಸ್ವಾತಂತ್ರ್ಯ, ಸಮೃದ್ಧಿ, ಶಾಂತಿ ತನ್ನಷ್ಟಕ್ಕೇ ಬರುವುದಿಲ್ಲ. ಈಗಿನ ನಮ್ಮ ಪ್ರಜಾಸತ್ತೆ ಕೇವಲ ಅಸ್ಥಿಪಂಜರ. ಅದಕ್ಕೆ ರಕ್ತಮಾಂಸ ಜೀವಗಳಿಲ್ಲ. ಮಾನವೀಯತೆಯೂ ಇಲ್ಲ. ಆದರ್ಶಗಳೂ ಮೌಲ್ಯಗಳೂ ಇಲ್ಲ. ಒಂದು ಯಂತ್ರದಂತೆ ಅದು ಕೆಲಸ ಮಾಡುತ್ತಿದೆ. ಅದಕ್ಕೆ ರಕ್ತ ಮಾಂಸ ಜೀವ ತುಂಬಬೇಕಾದರೆ ಬಡಜನರಿಗೆ, ಸಾಮಾನ್ಯ ಜನರಿಗೆ, ದೀನದಲಿತರಿಗೆ, ಸ್ತ್ರೀಯರಿಗೆ ಆಧ್ಯಾತ್ಮಿಕ ಸಂಸ್ಕೃತಿ, ನೈತಿಕತೆಗಳ ದೀಕ್ಷೆ ದೊರೆಯಬೇಕು. ಚುನಾವಣೆಗಳಲ್ಲಿ ಸಜ್ಜನರು ಗೆಲ್ಲುವಂಥ ಪರಿಸ್ಥಿತಿ ನಿರ್ಮಾಣವಾಗಬೇಕು.

ಇಂದು ಭ್ರಷ್ಟಾಚಾರ ವ್ಯಾಪಕವಾಗಿರುವ ಕಾರಣ ಲಕ್ಷಾಂತರ ಕೋಟಿರೂಪಾಯಿ ಖರ್ಚುಮಾಡಿದರೂ ಸರಿಯಾಗಿ ಕೆಲಸ ಆಗುತ್ತಿಲ್ಲ. ಖರ್ಚಾದ ಹಣದ ಬಹು ಅಂಶ ಯಾರ್‍ಯಾರದೋ ಜೇಬಿನಲ್ಲಿ ಸೇರುತ್ತದೆ. ಇದಕ್ಕೆ ಕಾರಣ ಕೇವಲ ರಾಜಕಾರಣಿಗಳಷ್ಟೇ ಅಲ್ಲ, ಅಧಿಕಾರಿಗಳಷ್ಟೇ ಅಲ್ಲ, ಅವರನ್ನು ಸಹಿಸುವ, ಪ್ರೋತ್ಸಾಹಿಸುವ, ಸಮರ್ಥಿಸುವ ಚುನಾವಣೆಗಳಲ್ಲಿ ಗೆಲ್ಲಿಸುವ ಜನರೂ ಹೊಣೆಗಾರರಾಗಿದ್ದಾರೆ. ಈ ಪರಿಸ್ಥಿತಿ ಬದಲಾಯಿಸಬೇಕಾದರೆ ಜನಸಾಮಾನ್ಯರಲ್ಲಿ ನೈತಿಕ ಜವಾಬ್ದಾರಿ ಬೆಳೆಯಬೇಕು. ಇದನ್ನು ಸರಕಾರ ಮಾಡಲಾರದು. ನಾವೇ ಮಾಡಬೇಕಾಗುತ್ತದೆ. ಜಾತಿ, ಮತ, ದುಡ್ಡು ಮುಂತಾದ ಅನಿಷ್ಟಪ್ರಭಾವವನ್ನು ತಗ್ಗಿಸಬೇಕು. ಅದು ಸುಲಭದ ಕೆಲಸವಲ್ಲ. ಆದರೆ ಅಸಾಧ್ಯವಲ್ಲ. ಮಹಾತ್ಮಾ ಗಾಂಧಿಜೀಯಂಥವರು ತಮ್ಮ ನೈತಿಕ, ಆಧ್ಯಾತ್ಮಿಕ ಶಕ್ತಿಯಿಂದ ಅದನ್ನು ಮಾಡಿತೋರಿಸಿದ್ದಾರೆ. ಏಕೆಂದರೆ ಪ್ರತಿಯೊಬ್ಬ ಮನುಷ್ಯನಲ್ಲೂ ಒಳ್ಳೆಯತನದ ಅಂತರ್ಜಲ ಇದ್ದೇ ಇದೆ. ಅದನ್ನು ಹೊರತರುವ ಕೆಲಸ ಆಗಬೇಕಾಗಿದೆ. ಅದನ್ನು ಮಾಡಲು ನೈತಿಕ, ಆಧ್ಯಾತ್ಮಿಕ ಶಕ್ತಿಯುಳ್ಳ ಜನರು ತಯಾರಾಗಬೇಕು. ಈಗಲೂ ಅಲ್ಲಲ್ಲಿ ಅಂಥ ವ್ಯಕ್ತಿಗಳಿದ್ದಾರೆ. ಬಿಳಿಗಿರಿ ರಂಗನಬೆಟ್ಟ, ಹೆಗ್ಗಡದೇವನ ಕೋಟೆಗಳಲ್ಲಿ ಅತ್ಯಂತ ಹಿಂದುಳಿದ ಆದಿವಾಸಿಗಳೊಂದಿಗೆ ಬದುಕುತ್ತಾ ಅವರ ಅಭಿವೃದ್ಧಿಗಾಗಿ ಸಮರ್ಪಣಾ ಭಾವದಿಂದ ದುಡಿಯುವ ಆಧುನಿಕ ವಿದ್ಯಾಭ್ಯಾಸ ಮಾಡಿದ ವೈದ್ಯರುಗಳಿದ್ದಾರೆ. ಅಂಥವರ ಜೀವನ ನಮ್ಮ ಯುವಕರಿಗೆ ಸ್ಫೂರ್ತಿಪ್ರೇರಣೆ ನೀಡುವಂತಾಗಬೇಕು.

ಇಂದಿನ ವಿದ್ಯಾಭ್ಯಾಸದ ಪದ್ಧತಿಯಲ್ಲಿ ಸಾಮರ್ಥ್ಯ(ability or skill) ಹೆಚ್ಚಿಸುವುದೇ ಏಕೈಕ ಗುರಿಯಾಗಿದೆ. ಅದರ ಜೊತೆ ಸೌಜನ್ಯ (nobility) ಅಂದರೆ ಸಾಮರ್ಥ್ಯವನ್ನು ಸಮಾಜೋಪಯೋಗಿಯಾಗಿ ಬಳಸುವ ಮನೋಧರ್ಮವನ್ನು ನಿರ್ಮಿಸುವ, ನೈತಿಕ ಮೌಲ್ಯಗಳನ್ನು ಬೆಳೆಸುವ ಪ್ರಯತ್ನವೇ ಇಲ್ಲ. ಸೌಜನ್ಯವಿಲ್ಲದ ಸಾಮರ್ಥ್ಯ ರಾಕ್ಷಸರನ್ನು ಸೃಷ್ಟಿಸುತ್ತದೆ. "ಸಾಕ್ಷರ"ರು ವಿಪರೀತರಾದರೆ "ರಾಕ್ಷಸ"ರಾಗುತ್ತಾರೆ ಎಂದಂತೆ ಇದು. ರಾವಣ ದುರ್ಯೋಧನಾದಿಗಳು ಶಕ್ತಿ, ಸಾಮರ್ಥ್ಯ, ಪಾಂಡಿತ್ಯ, ಚಾತುರ್ಯಗಳಲ್ಲಿ ಯಾರಿಗೂ ಕಡಮೆಯಾಗಿರಲಿಲ್ಲ. ಆದರೆ ಅವರು ಅದನ್ನೆಲ್ಲ ತಮ್ಮ ಸ್ವಾರ್ಥಕ್ಕೆ, ಪ್ರತಿಷ್ಠೆಗೆ, ಅಹಂಕಾರ ತೃಪ್ತಿಗೆ, ಅನ್ಯರ ಮೇಲೆ ದಬ್ಬಾಳಿಕೆ ಮಾಡುವುದಕ್ಕೆ ಬಳಸಿದರು. ಈಗಲೂ ವೀರಪ್ಪನ್ ಅಂಥ ರಾಕ್ಷಸರ ಸಾಮರ್ಥ್ಯವನ್ನು ಪ್ರಶ್ನಿಸಲು ಸಾಧ್ಯವಿಲ್ಲ. ಆದರೆ ಅದು ಸೌಜನ್ಯರಹಿತವಾದ ಸಾಮರ್ಥ್ಯ. ಆದ್ದರಿಂದಲೇ ಅಪಾಯಕಾರಿ. ಆದ್ದರಿಂದ ನಾವು ಸಾಮರ್ಥ್ಯದ ಜೊತೆ ಸೌಜನ್ಯದ ಅಂದರೆ

ನೈತಿಕ ಮೌಲ್ಯಗಳನ್ನು ಬೆಳೆಸಬೇಕು. ಅದಕ್ಕೆ ಅಂಥ ಬದುಕನ್ನು ಬದುಕಿದವರ ಉದಾಹರಣೆಗಳು ನಮ್ಮ ಮುಂದಿರಬೇಕು. ಕೇವಲ ಉಪದೇಶದಿಂದಲೇ ಎಲ್ಲವೂ ಸಾಧ್ಯವಿಲ್ಲ.

ಮನುಷ್ಯನಿಗೆ ನೈತಿಕಮೌಲ್ಯ ಏಕೆ ಬೇಕು? ಬಲಶಾಲಿಗೇ ಬದುಕು (Survival of the fittest) ಎಂಬ ಸಿದ್ಧಾಂತದ ಪ್ರಕಾರ ಸಾಮರ್ಥ್ಯವಿದ್ದವರು ಗೆಲ್ಲುತ್ತಾರೆ. ಇಲ್ಲದವರು ನಾಶವಾಗುತ್ತಾರೆ. ಹಾಗೆಯೇ ಆಗಲಿ ಎನ್ನುವವರಿದ್ದಾರೆ! ಈ ಸಿದ್ಧಾಂತ ಪ್ರಾಣಿಗಳಿಗೆ ಅನ್ವಯಿಸಬಹುದು. ಆದರೆ ಮನುಷ್ಯನಲ್ಲಿ ಪ್ರಾಣಿಧರ್ಮವಿದ್ದರೂ ಅವನು ಪಶುತ್ವವನ್ನು ಮೀರಿದವನು. ದೇವತ್ವಕ್ಕೆ ಏರುವ ಶಕ್ತಿ ಇದ್ದವನು. ಪ್ರಾಣಿಗಳಿಗೆ ನಿಸರ್ಗಸಹಜವಾದ ನೈತಿಕತೆ ಇದೆ. ಅವು ತಮ್ಮ ಮೂಲಭೂತ ಅವಶ್ಯಕತೆಗಳನ್ನು ತೃಪ್ತಿಪಡಿಸುವುದಕ್ಕೆ ಎಷ್ಟು ಬೇಕೋ ಅಷ್ಟೇ ಚಟುವಟಿಕೆಗಳನ್ನು ಮಾಡುತ್ತವೆ. ಅತಿರೇಕಕ್ಕೆ ಹೋಗುವುದಿಲ್ಲ. ಪ್ರಾಣಿಗಳು ತಮ್ಮ ಆಯಾದಿನದ ಹಸಿವೆಗಾಗಿ ಇನ್ನೊಂದು ಪ್ರಾಣಿಯನ್ನು ಕೊಲ್ಲಬಹುದು. ಆದರೆ ಅನವಶ್ಯವಾಗಿ ನೂರಾರು ಪ್ರಾಣಿಗಳನ್ನು ಕೊಲ್ಲುವುದಿಲ್ಲ. ಯಾವ ಪ್ರಾಣಿಯೂ ನಿಸರ್ಗದ ಮಿತಿಗಳನ್ನು ಮೀರಿ ವರ್ತಿಸುವುದಿಲ್ಲ. ಆದರೆ ಮನುಷ್ಯನು ಹಾಗಲ್ಲ. ಅವನ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಕ್ರೌರ್ಯಗಳಿಗೆ ಮಿತಿಯಿಲ್ಲ. ಆದ್ದರಿಂದಲೇ ಅವನಿಗೊಂದು ನೀತಿಸಂಹಿತೆ ಬೇಕೇ ಬೇಕು. ಮನುಷ್ಯ ರಾಕ್ಷಸನೂ ಆಗಬಲ್ಲ, ದೇವತೆಯೂ ಆಗಬಲ್ಲ. ಆದ್ದರಿಂದ ನೈತಿಕತೆ ಮನುಷ್ಯನಿಗೆ ಅನಿವಾರ್ಯ. ಮೌಲ್ಯಗಳು ಬೇಕೇಬೇಕು. ನೈತಿಕ ಮೌಲ್ಯಗಳಿಲ್ಲದೆ ವ್ಯಕ್ತಿಯಾಗಲೀ ಸಮಾಜವಾಗಲೀ ದೇಶವಾಗಲೀ ಉಳಿಯಲು ಸಾಧ್ಯವಿಲ್ಲ. ಈಗಲೂ ಹೆಚ್ಚಿನ ಜನಸಾಮಾನ್ಯರು ನೈತಿಕತೆಯುಳ್ಳವರಾಗಿರುವುದರಿಂದಲೇ ಜೀವನ ಇಷ್ಟರಮಟ್ಟಿಗಾದರೂ ಸಹನೀಯವಾಗಿದೆ.

ನೈತಿಕತೆಗೆ ಆಧ್ಯಾತ್ಮಿಕ ಹಿನ್ನೆಲೆ ಇಲ್ಲದಿದ್ದರೆ ಅದು ಗಟ್ಟಿಯಾಗಿ ನಿಲ್ಲಲಾರದು. ಆದುದರಿಂದ ಆಧ್ಯಾತ್ಮಿಕ ಮೌಲ್ಯಗಳು ಅತ್ಯಂತ ಅಗತ್ಯ. ಈ ಆಧ್ಯಾತ್ಮಿಕ ಮೌಲ್ಯಗಳನ್ನು ಮರೆತರೆ ಭಾರತದ ಅವನತಿ ಎಂದು ವಿವೇಕಾನಂದರು ಮತ್ತೆ ಮತ್ತೆ ಎಚ್ಚರಿಕೆ ನೀಡಿದ್ದಾರೆ.

ಸ್ವಾತಂತ್ರ್ಯ ಎಂದರೆ ಸ್ವಚ್ಛಂದತೆ ಅಲ್ಲ. ನಮ್ಮ ಸ್ವಾತಂತ್ರ್ಯ ಇನ್ನೊಬ್ಬನ ಸ್ವಾತಂತ್ರ್ಯಕ್ಕೆ ತೊಡಕಾಗಬಾರದು. ಆದುದರಿಂದ ಸ್ವಾತಂತ್ರ್ಯಕ್ಕೂ ಒಂದು ಮಿತಿ ಶಿಸ್ತು ಇರಬೇಕಾಗುತ್ತದೆ. ಏಕೆಂದರೆ ಈ ಜಗತ್ತಿನಲ್ಲಿ ಸರ್ವತಂತ್ರ ಸ್ವತಂತ್ರ ಎಂಬುದಿಲ್ಲ. ಎಲ್ಲವೂ ಒಂದನ್ನೊಂದು ಹೊಂದಿಕೊಂಡಿವೆ. ಒಂದು ಕಾಲದಲ್ಲಿ ಮನುಷ್ಯನಿಗಾಗಿ ಈ ಜಗತ್ತು ಸೃಷ್ಟಿಯಾಗಿದೆ ಎಂಬ ಭ್ರಮೆ ಪಾಶ್ಚಾತ್ಯರಲ್ಲಿತ್ತು. ಭಾರತೀಯ ಪರಂಪರೆ ಅದಲ್ಲ. ಎಲ್ಲವೂ ಭಗವಂತನ ಆವಾಸಸ್ಥಾನ ಎಂಬುದು ನಮ್ಮ ಸಂಸ್ಕೃತಿ. ಈಗ ವಿದೇಶದಲ್ಲೂ ಪರಿಸರ ಪ್ರಜ್ಞೆ ಮೂಡಿದೆ. ಪ್ರತಿಯೊಂದು ಜೀವಿಗೂ ವಿಶ್ವದಲ್ಲಿರುವ ಇನ್ನೊಂದು ಜೀವಿಗೂ ಹಾಗೂ ಜಡ ಪ್ರಕೃತಿಗೂ ಗಾಢ ಸಂಬಂಧವಿದೆ ಎನ್ನುವುದನ್ನು ಪಾಶ್ಚಾತ್ಯರೂ ಕಂಡುಕೊಂಡಿದ್ದಾರೆ. ಮನುಷ್ಯ ಪ್ರಕೃತಿಯ ಶಿಶು, ಅದರ ಮಾಲಿಕನಲ್ಲ. ಆದ್ದರಿಂದ ಅವನು ಸ್ವೇಚ್ಛಾಚಾರಿಯಾಗಕೂಡದು. ತನ್ನ ಮಿತಿಯನ್ನು ಅರಿತುಕೊಂಡು ತನ್ನ ಶಕ್ತಿಯನ್ನು ತಿಳಿದುಕೊಂಡು ವೈಯಕ್ತಿಕ ಸ್ವಾತಂತ್ರ್ಯದೊಂದಿಗೆ ಸಮಷ್ಟಿಹಿತವನ್ನು ಸಮನ್ವಯಗೊಳಿಸಿಕೊಂಡು ಬಾಳಬೇಕು. ಸ್ವಾಮಿ ವಿವೇಕಾನಂದರು ಹೇಳಿದ **ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ** ಎಂಬ ಮಂತ್ರ ಎಲ್ಲ ದೇಶಗಳಲ್ಲೂ ಎಲ್ಲ ಕಾಲಗಳಲ್ಲೂ ಎಲ್ಲರಿಗೂ ಅನ್ವಯಿಸುವ ಧ್ಯೇಯವಾಕ್ಯ. ವೈಯಕ್ತಿಕ ಆಧ್ಯಾತ್ಮಿಕ ಪ್ರಗತಿ, ಸಾಮಾಜಿಕ ಕಲ್ಯಾಣ, ತಾನು ಒಳ್ಳೆಯವನಾಗಿದ್ದುಕೊಂಡು ಇತರರಿಗೂ ಒಳಿತನ್ನು ಮಾಡುವುದು ಮನುಷ್ಯರ ಆದರ್ಶವಾಗಬೇಕು. ಎಲ್ಲರೂ ರಾಷ್ಟ್ರದ ಕಲ್ಯಾಣಕ್ಕಾಗಿ ಸದ್ಭಾವನೆ ಸೌಹಾರ್ದಕ್ಕಾಗಿ ಸರ್ವಶಕ್ತನಾದ ಭಗವಂತನನ್ನು ಪ್ರಾರ್ಥಿಸೋಣ.

---

## ಕ್ರಿಯಾ ಸಿದ್ಧಿಃ ಸತ್ತ್ವೇ ಭವತಿ

ಓರ್ವ ಭಕ್ತರು

ಓದುವ ಅಭ್ಯಾಸವುಳ್ಳ, ಜ್ಞಾನಪಿಪಾಸೆಯುಳ್ಳ ಯಾರೊಬ್ಬನೂ ನಿಘಂಟನ್ನು ಆಶ್ರಯಿಸದೇ ಇರಲು ಸಾಧ್ಯವೇ ಇಲ್ಲ. ಅಧ್ಯಯನದಲ್ಲಿ ಆಸಕ್ತನಾದ ಪ್ರತಿಯೊಬ್ಬನಿಗೂ ಈ ನಿಘಂಟಿನ ಹಿರಿಮೆ-ಗರಿಮೆಗಳ ಪರಿಚಯವಿದ್ದೇ ಇರುತ್ತದೆ. ಈಗ ಸಾಮಾನ್ಯವಾಗಿ ಎಲ್ಲ ಭಾಷೆಗಳ ನಿಘಂಟುಗಳೂ ಉಪಲಬ್ಧವಿದೆ. ಇಂಗ್ಲಿಷ್ ಭಾಷೆಯ ನಿಘಂಟನ್ನು ಮೊಟ್ಟಮೊದಲ ಬಾರಿಗೆ ರಚಿಸಿದವನು ಶ್ರೀ ಸ್ಯಾಮ್ಯುಯೆಲ್ ಜಾನ್‌ಸನ್.

ಈತ ಕ್ರಿ.ಶ.೧೭೦೯ರಲ್ಲಿ ಜನಿಸಿದ. ಹುಟ್ಟಿದಾಗಿನಿಂದ ಖಾಯಿಲೆಗಳಲ್ಲೇ ನರಳುತ್ತಿದ್ದ. ಈತನಿಗೆ ಕ್ಷಯರೋಗ ತಗುಲಿದಾಗ ಇವನ ತಂದೆ ತಾಯಿ ಇವನ ಆರೋಗ್ಯ ರಕ್ಷಣೆಗಾಗಿ ಮಾಡಿದ ಪ್ರತಿಪ್ರಯತ್ನವೂ ಇವನಿಗೆ ಬೇರೆ ಬೇರೆ ತೊಂದರೆಗಳನ್ನು ಉಂಟುಮಾಡಿದವೇ ಹೊರತು ಇವನ ಆರೋಗ್ಯ ಯಾವ ರೀತಿಯಲ್ಲೂ ಸುಧಾರಿಸಲೇ ಇಲ್ಲ. ಈ ಸಮಯದಲ್ಲಿ ಇವನ ಶಬ್ದಗ್ರಹಣ ಕುಗ್ಗಿತು. ಒಂದು ಕಣ್ಣಿನ ದೃಷ್ಟಿಯನ್ನೂ ಕಳೆದುಕೊಂಡ. ಬಹಳ ದೊಡ್ಡವನಾಗುವವರೆಗೆ ಮಾತನಾಡಲೂ ಬರುತ್ತಿರಲಿಲ್ಲ. ಆದುದರಿಂದ ಸುಮಾರು ಜನರು ಇವನು ಒಂದು ದೊಡ್ಡ ಪೀಡೆಯೆಂದೇ ತಿಳಿದಿದ್ದರು.

ಇವನ ತಂದೆ ಒಬ್ಬ ಪುಸ್ತಕ ವ್ಯಾಪಾರಿ. ಆದುದರಿಂದ ಇವನಿಗೆ ಪುಸ್ತಕಗಳು ಸುಲಭವಾಗಿ ದೊರಕುತ್ತಿದ್ದವು. ಈ ಕಾರಣದಿಂದ ಬಹಳ ಸಣ್ಣ ವಯಸ್ಸಿಗೇ ಇವನು ಪುಸ್ತಕ ಹುಳುವಾಗಿ ತುಂಬಾ ಓದಿ ಅಧಿಕ ಜ್ಞಾನ ಸಂಪಾದಿಸಿದ್ದ. ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾಭ್ಯಾಸ ಮಾಡುವ ಆಸೆಯಿಂದ ಶಾಲೆಗೆ ಸೇರಿದ. ಆದರೆ ಬಡತನದ ಕಾರಣ ವಿದ್ಯಾಭ್ಯಾಸ ಮುಂದುವರಿಸಲಾಗದೆ ಒಂದೇ ವರ್ಷದಲ್ಲಿ ಹಿಂತಿರುಗಬೇಕಾ